ಕೇಳಿದಂಥ ಪ್ರಶ್ನೆಗೆ ಮೂರು ತಿಂಗಳಲ್ಲೇ ಕಾಂಪೌಂಡ್ ವಾಲ್ ಕಟ್ಟಿಸಿಕೊಡುತ್ತೇವೆ ಎಂದು ಮಾನ್ಯ ಸಚಿವರು ಉತ್ತರ ಹೇಳಿದುದ್ದನ್ನು ಕೇಳಿ ಬಹಳ ಖುಷಿಯಾಯಿತು. ಅದೇ ರೀತಿಯಲ್ಲಿ, ನಮ್ಮ ಮಳಖೇಡ್ ನವೋದಯ ಶಾಲೆಗೆ ಕೂಡ ಕಾಂಪೌಂಡ್ ವಾಲ್ ಮಾಡಿಸಿಕೊಡಬೇಕು ಎನ್ನುವುದು ನನ್ನ ಮನವಿ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ : ಹಿರಿಯ ಸದಸ್ಯರಾದಂಥ ಕೃಷ್ಣಪ್ಪನವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಮೊರಾರ್ಜಿ ದೇಸಾಯಿ ಶಾಲೆಗಳ ನಿರ್ವಹಣೆಯನ್ನು ಜಿಲ್ಲಾ ಪಂಚಾಯತಿಗಳಿಗೆ ವರ್ಗಾವಣೆ ಮಾಡದೇ, ಇಲಾಖೆಯಿಂದ ನೇಮಕಗೊಂಡ ಒಂದು ಸಂಸ್ಥೆ ಇದ್ದು, ಅದರ ಮುಖಾಂತರ ನಡೆಸಬೇಕು ಎಂದು ಸಲಹೆ ಕೊಟ್ಟಿದ್ದಾರೆ. ತಾವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಸರ್ಕಾರ ಇದನ್ನು ಗಮನದಲ್ಲಿಟ್ಟು ಕೊಂಡು, ಇದರ ಬಗ್ಗೆ ಪರಿಶೀಲನೆ ಮಾಡುತ್ತದೆ. ಮತ್ತೊಬ್ಬ ಸದಸ್ಯರು ತಮ್ಮ ಕ್ಷೇತ್ರದಲ್ಲಿರುವ ಶಾಲೆಗೆ ಕಾಂಪೌಂಡ್ ವಾಲ್ ಇಲ್ಲ, ಅದನ್ನು ಕಟ್ಟಿಸಿಕೊಡಿ ಎಂದು ಕೇಳಿದರು. ಆದಷ್ಟು ಶೀಘ್ರದಲ್ಲಿ ಅದನ್ನು ಕಟ್ಟಿಸಿಕೊಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಭರವಸೆಯನ್ನು ಕೊಡುತ್ತೇವೆ.

ಹಿರೇಕೆರೂರು ತಾಲ್ಲೂಕಿನ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು.

177 (900): ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿರೇಕೆರೂರು ತಾಲ್ಲೂಕಿನ ಸಮುದಾಯ ಆರೋಗ್ಯ ಕೇಂದ್ರವನ್ನು 100 ಹಾಸಿಗೆ ಮೇಲ್ದರ್ಜೆಗೇರಿಸಿದ್ದು, ಇದು ಕಾರ್ಯಗತವಾಗಿದೆಯೇ ?

ಆ) ಈ ಆಸ್ಪತ್ರೆಗೆ ಮೊದಲು ಹೊಂದಿದ್ದ ವೈದ್ಯರು ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಇ) 100 ಹಾಸಿಗೆ ಮೇಲ್ದರ್ಜೆಗೇರಿಸಿದ ನಂತರ ಈ ಆಸ್ಪತ್ರೆ ಹೊಂದಿದ ವೈದ್ಯರು ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಈ) ಇಲ್ಲಿಯವರೆಗೆ ಎಷ್ಟು ವೈದ್ಯರುಗಳು ಹಾಗೂ ಸಿಬ್ಬಂದಿಗಳನ್ನು ನೇಮಿಸಲಾಗಿದೆ ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಈ ಆಸ್ಪತ್ರೆಗೆ ಮೊದಲು ಹೊಂದಿದ್ದ ವೈದ್ಯರು ಹಾಗೂ ಇತರೆ ಸಿಬ್ಬಂದಿ ವಿವರ ಈ ಕೆಳಕಂಡಂತಿದೆ.

ವೈದ್ಯಾಧಿಕಾರಿಗಳು	06
ದಂತ ವೈದ್ಯರು	01
ಶುಶ್ರೂಷಕಿಯರು	07
ಎಎನ್ಎಂ	01

7.00 P.M.

ಕ್ಷ-ಕಿರಣ ತಂತ್ರಜ್ಞರು	01
ನೇತ್ರ ಸಹಾಯಕರು	01
ಫಾರ್ಮಸಿಸ್ಟ್	01
ಲ್ಯಾಬ್ ಟೆಕ್ನೀಷಿಯನ್	01
ಪ್ರಥಮ ದರ್ಜೆ ಸಹಾಯಕರು	01
ವಾಹನ ಚಾಲಕರು	01
ಗ್ರೂಪ್-ಡಿ	12
ಒಟ್ಟು	**34**

ಇ) 100 ಹಾಸಿಗೆ ಮೇಲ್ದರ್ಜೆಗೇರಿಸಿದ ನಂತರ ಈ ಆಸ್ಪತ್ರೆಗೆ ಹೆಚ್ಚುವರಿಯಾಗಿ 06 ವೈದ್ಯಾಧಿಕಾರಿಗಳು ಹಾಗೂ 37 ಇತರೆ ಸಿಬ್ಬಂದಿಗಳನ್ನು ಮಂಜೂರಾತಿ ಮಾಡಲಾಗಿದೆ.

ಈ) ಹೆಚ್ಚುವರಿಯಾಗಿ ಮಂಜೂರಾದ 06 ವೈದ್ಯಾಧಿಕಾರಿಗಳು ಹಾಗೂ 07 ಶುಶ್ರೂಷಕಿಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಶ್ರೀ ಬಿ. ಸಿ. ಪಾಟೀಲ್ : ಮಾನ್ಯ ಛೇರ್ಮನ್‌ರವರೇ, ಏನಾದರೂ ಸುಧಾರಣೆ ಆಗಬಹುದೇ ಅಥವಾ ಏನಾದರೂ ಪರಿಹಾರ ಸಿಗಬಹುದೆಂದು ಈ ಪ್ರಶ್ನೆಯನ್ನು ಕೇಳಿದ ಉದ್ದೇಶವಾಗಿದೆ. ಆದರೆ ಈ ಉತ್ತರವನ್ನು ನೋಡಿದರೆ ನಗಬೇಕೋ ಅಳಬೇಕೋ ಎನ್ನುವುದು ಒಂದೂ ಗೊತ್ತಾಗುತ್ತಿಲ್ಲ. ಬೇಜವಾಬ್ದಾರಿಯ, ಹಾಸ್ಯಸ್ಪದ ಉತ್ತರ ಇದಾಗಿದೆ. ನಾನು ಕೇಳಿದ ಪ್ರಶ್ನೆಗೂ ಸರ್ಕಾರ ಕೊಟ್ಟ ಉತ್ತರಕ್ಕೂ ಸಂಬಂಧವೇ ಇಲ್ಲ. ಸದರಿ ಆಸ್ಪತ್ರೆ 1-4-2006ರಿಂದ ಮೇಲ್ದರ್ಜೆಗೇರಿದ ನಂತರ ಆ ಮೇಲ್ದರ್ಜೆ ಆಸ್ಪತ್ರೆಯನ್ನಾಗಿ ಮಾಡಿದ್ದೀರಾ ಎಂದು ಕೇಳಿದರೆ 'ಹೌದು' ಎಂದು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಮೊದಲಿದ್ದಷ್ಟೇ ವೈದ್ಯರುಗಳಿದ್ದಾರೆ ಹೊರತು ಇಲ್ಲಿಗೆ ಹೊಸದಾಗಿ ಯಾವ ವೈದ್ಯರುಗಳನ್ನು ಕೂಡ ನೇಮಕ ಮಾಡಿಲ್ಲ. ಒಬ್ಬ ವೈದ್ಯರನ್ನು ಮೊನ್ನೆ ವರ್ಗಾವಣೆ ಮಾಡಿದ್ದಾರೆ. ಅವರು 31-05-2000ಕ್ಕೆ ನಿವೃತ್ತಿ ಹೊಂದಿಬಿಟ್ಟಿದ್ದಾರೆ. ನಿವೃತ್ತಿ ಹೊಂದಿದ ವೈದ್ಯರನ್ನು ನಮ್ಮ ಹಿರೇಕೆರೂರು ಆಸ್ಪತ್ರೆಗೆ ನೇಮಕ ಮಾಡಿದ್ದಾರೆ. ಈಗಿರುವ ಸಿಬ್ಬಂದಿ 33 ಇದ್ದು ಅದನ್ನು ಸರ್ಕಾರ ಉತ್ತರ ಕೊಡುವಾಗ 34 ಎಂದು ಉತ್ತರದಲ್ಲಿ ನೀಡಿದ್ದು ಅದಕ್ಕೆ ಮಾನ್ಯ ಆರೋಗ್ಯ ಸಚಿವರ ಸಹಿ ಇದೆ. ಸದರಿ ಆಸ್ಪತ್ರೆ ಮೇಲ್ದರ್ಜೆಗೇರಿದ ಮೇಲೆ ಸರ್ಕಾರದ ಉತ್ತರದ ಪ್ರಕಾರ ಹಿರೇಕೆರೂರು ಆಸ್ಪತ್ರೆಯಲ್ಲಿ 13 ವೈದ್ಯರು ಇರಬೇಕಾಗುತ್ತದೆ. 14 ಜನ ಶುಶ್ರೂಷಕಿಯರು ಇರಬೇಕಾಗುತ್ತದೆ. ಒಟ್ಟು ಸಿಬ್ಬಂದಿ 63 ಜನ ಇರಬೇಕು. ಆದರೆ ನಾನು ಕೇಳಿದಂಥ ಪ್ರಶ್ನೆಗೂ ಸರ್ಕಾರ ಕೊಟ್ಟ ಉತ್ತರಕ್ಕೂ ಒಂದಕ್ಕೊಂದು ಸಂಬಂಧವಿಲ್ಲ. ಹಿಂದಿನ ಸರ್ಕಾರದಲ್ಲಿ ಇದ್ದಂಥ ಆರೋಗ್ಯ ಸಚಿವರು ಆಸ್ಪತ್ರೆಗಳ ರಿಪೇರಿಗೆ ಎಂದು 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರು. ಆವತ್ತಿನ ದಿವಸ 50 ಸಾವಿರ ರೂಪಾಯಿಗಳನ್ನು ಆಸ್ಪತ್ರೆ ಮುಂದೆ ಒಡೆದಂಥ compound ಗೆಂದು ಇಟ್ಟಿದ್ದರು. ಆ 50 ಸಾವಿರ ರೂಪಾಯಿಗಳನ್ನು ಏನು ಮಾಡಿದರೆಂದರೆ, ಈ ಆಸ್ಪತ್ರೆ ಮೇಲ್ದರ್ಜೆಗೇರಿದೆ,

ಛೇರ್ಮನ್ : ನೀವು ಏನಾಗಬೇಕೆಂದು ನೇರವಾಗಿ ಉಪಪ್ರಶ್ನೆಯನ್ನು ಕೇಳಿ. ಅದು ಬಿಟ್ಟು ವಿವರಣೆ ನೀಡುತ್ತಾ ಹೋದರೆ ಆಗುವುದಿಲ್ಲ.

ಶ್ರೀ ಬಿ. ಸಿ. ಪಾಟೀಲ್ : ನಾನು ಪೂರ್ತಿ ವಿವರಣೆ ಹೇಳಿದರೆ ಏನೆಂಬುದು ಗೊತ್ತಾಗುತ್ತದೆ. ಆವತ್ತು ಏನು ಮಾಡಿದರೆಂದರೆ, ಮೇಲ್ದರ್ಜೆಗೇರಿದೆ, ಹೊಸ building ಆಗುತ್ತದೆಂದು ಬಂದ ಹಣವನ್ನೂ ಕೂಡ ಬೇರೆ ಕಡೆಗೆ ವರ್ಗಾವಣೆ ಮಾಡಿದರು. ಈಗ compound ಆಗಲಿಲ್ಲ, ಆಸ್ಪತ್ರೆ ಮೇಲೆ building ಆಗಲಿಲ್ಲ, ಯಾವ ವೈದ್ಯರುಗಳೂ ಕೂಡ ಅಲ್ಲಿಗೆ ಹೊಸದಾಗಿ ಬಂದಿಲ್ಲ, ನಿವೃತ್ತಿಯಾದ ವೈದ್ಯರನ್ನು ಅಲ್ಲಿಗೆ ನೇಮಕ ಮಾಡಿದ್ದಾರೆ. ಅಲ್ಲಿ ಇದ್ದಂಥ ವೈದ್ಯರುಗಳನ್ನೂ ಕೂಡ ಬೇರೆ ಕಡೆಗೆ ವರ್ಗಾವಣೆ ಮಾಡಿದ್ದಾರೆ. ಇವತ್ತು ಆ ಆಸ್ಪತ್ರೆಯ ವ್ಯವಸ್ಥೆ ಸಂಪೂರ್ಣವಾಗಿ ಅವ್ಯವಸ್ಥೆಯಾಗಿ ಕುಸಿದುಬಿದ್ದಿದೆ. ಇದಕ್ಕೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಛೇರ್ಮನ್‌ರವರೇ, ಹೊಸದಾಗಿ upgrade ಆಗಿರುವ ಆಸ್ಪತ್ರೆ ಇದಾಗಿದೆ. ಅಲ್ಲಿ 12+1 dental ಸೇರಿ ಒಟ್ಟು 13 ಜನ ವೈದ್ಯರುಗಳಿರಬೇಕಾಗಿತ್ತು. ಅದರಲ್ಲಿ 7 ಜನ work ಮಾಡುತ್ತಿದ್ದಾರೆ. ಮಾನ್ಯ ಶಾಸಕರು ಹೇಳಿದ ಹಾಗೆ ಅದರಲ್ಲಿ ಒಬ್ಬರು transfer ಆದ ಮೇಲೆ ಅವರು retired ಆಗಿ ಹೋಗಿದ್ದಾರೆ. ಅದಕ್ಕೆ ಬೇರೆ ವೈದ್ಯರನ್ನು ನೇಮಕ ಮಾಡುವ ಕೆಲಸವನ್ನು ನಾವು ಮಾಡುತ್ತೇವೆ. 6 vacant ಇದೆ. ಅದಕ್ಕೋಸ್ಕರ ಸುಮಾರು 500 ಜನ ವೈದ್ಯರನ್ನು ನೇಮಕ ಮಾಡಬೇಕೆಂದು ಈಗಾಗಲೇ ಸರ್ಕಾರ ತೀರ್ಮಾನ ಮಾಡಿರುವುದರಿಂದ, ಅದರ ಜೊತೆಗೆ 400 ಜನ ಶುಶ್ರೂಷಕಿಯರನ್ನು ನೇಮಕ ಮಾಡುವಂಥದ್ದು, 329 ಜನ ಕಿರಿಯ ಸಹಾಯಕರನ್ನು ನೇಮಕ ಮಾಡುವಂಥದ್ದು, 532 ಜನ ಕಿರಿಯ ಪ್ರಯೋಗಶಾಲಾ ತಂತ್ರಜ್ಞರನ್ನು ನೇಮಕ ಮಾಡತಕ್ಕಂಥದ್ದು, x-ray technician 56 ಜನರನ್ನು ಮಾಡುವಂಥದ್ದು ಔಷಧಿ ವಿತರಕರು 400 ಜನ, ನೇತ್ರ ಸಹಾಯಕರು 90 ಜನ ಕಿರಿಯ ಆರೋಗ್ಯ ಸಹಾಯಕರು (ಮಹಿಳೆಯರು) ಸಾವಿರ ಜನರನ್ನು ಈಗಾಗಲೇ ನೇಮಕ ಮಾಡುವುದಕ್ಕೆ ನಾವು ತೀರ್ಮಾನ ತೆಗೆದುಕೊಂಡಿರುವುದರಿಂದ ಆದಷ್ಟು ಶೀಘ್ರವಾಗಿ upgrade ಆಗಿರತಕ್ಕಂಥ ಅವರ ಕ್ಷೇತ್ರದ ಆಸ್ಪತ್ರೆಗೆ ಎಷ್ಟು ಅವಶ್ಯಕತೆ ಇದೆಯೋ ಅವೆಲ್ಲವನ್ನು ಭರಿಸುವುದಕ್ಕೆ ನಾವು ಪ್ರಾಮಾಣಿಕ ಪ್ರಯತ್ನಗಳನ್ನು ಮಾಡುತ್ತೇವೆ. ಅವರ ನೇಮಕಾತಿಗೆ gezette ಹೊರಡಿಸಲಾಗಿದೆ. ಈಗಾಗಲೇ ನಾವು gazette ಹೊರಡಿಸಿರುವುದರಿಂದ, ಆದಷ್ಟು ಶೀಘ್ರವಾಗಿ ತಮ್ಮ ಆಸ್ಪತ್ರೆಯಲ್ಲಿ ವೈದ್ಯರ ಕೊರತೆ ಇರದ ಹಾಗೆ ನೋಡಿಕೊಳ್ಳುವ ಕೆಲಸವನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಿ, ಅವರ ಆಸ್ಪತ್ರೆಗೆ compound ಹಾಕುವುದಕ್ಕೆ 5 ಲಕ್ಷ ರೂಪಾಯಿಗಳು ಏನು sanction ಆಗಿತ್ತು, ಅದು ಬೇರೆ ಕಡೆಗೆ ಹೋಗಿದೆ ಎಂದು ತಾವು ನನ್ನ ಗಮನಕ್ಕೆ ತಂದಿದ್ದೀರಿ. ನಿಮ್ಮ ಆಸ್ಪತ್ರೆಗೆ ಏನು sanction ಆಗಿತ್ತು ಆ ಹಣವನ್ನು ಆದಷ್ಟು ಶೀಘ್ರವಾಗಿ ಪುನಃ ನಿಮ್ಮ ಆಸ್ಪತ್ರೆಗೆ compund ಕಟ್ಟುವುದಕ್ಕೆ ಬೇಕಾದ ವ್ಯವಸ್ಥೆಯನ್ನು ಶೀಘ್ರವಾಗಿ ಮಾಡಲಿಕ್ಕೆ ನಾನು ವ್ಯವಸ್ಥೆ ಮಾಡುತ್ತೇನೆ.

ಶ್ರೀ ಬಿ.ಸಿ. ಪಾಟೀಲ್ : ಮಾನ್ಯ ಛೇರ್ಮನ್‌ರವರೆ, ಹೆಚ್ಚುವರಿಯಾಗಿ ಮಂಜೂರಾದ 6 ವೈದ್ಯಾಧಿಕಾರಿಗಳು ಮತ್ತು 7 ಶುಶ್ರೂಷಕಿಯರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು

ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ ಎಂದು ಉತ್ತರದಲ್ಲಿ ಕೊಟ್ಟಿದ್ದಾರೆ. 100 ಹಾಸಿಗೆಗಳ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿದ ಮೇಲೆ ಆ post ಗಳಿಗೆ ಬಂದಂಥವರು specialist Doctors. Specialist Doctors ಯಾರೂ ಗುತ್ತಿಗೆ ಆಧಾರದ ಮೇಲೆ ಬಂದು ಆಸ್ಪತ್ರೆಯಲ್ಲಿ ಕೆಲಸ ಮಾಡುವುದಿಲ್ಲ. ಅದನ್ನು ಸರ್ಕಾರವೇ ನೇಮಕಾತಿ ಮಾಡಬೇಕಾಗುತ್ತದೆ. ಅಲ್ಲಿ ಬರುವಂಥವರು ಆಯುರ್ವೇದಿಕ್ ಅಥವಾ B.A.M.S. Doctor ಬರುತ್ತಾರೆ. ಆಯುರ್ವೇದಿಕ್ Doctors injection ಮಾಡುವ ಹಾಗಿಲ್ಲ. Post-mortem ಮಾಡುವ ಹಾಗಿಲ್ಲ. ಹಾಗಾಗಿ ಕೆಲಸ ಕುಂಟಿತವಾಗುತ್ತದೆ. ಆದ್ದರಿಂದ ನೇರ ನೇಮಕಾತಿ ಮಾಡಿಕೊಂಡು ಇಲ್ಲಿಗೆ ವೈದ್ಯಾಧಿಕಾರಿಗಳನ್ನು ನೇಮಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಅಶೋಕ್ : ಆ 500 ಜನ ಏನು ನೇರ ನೇಮಕಾತಿ ಮಾಡಬೇಕೆಂದಿದ್ದೇವೆ, ಆ ನೇಮಕಾತಿಯಲ್ಲಿ ಸದರಿ ಆಸ್ಪತ್ರೆಗೆ ಬೇಕಾದಂಥ ಸಿಬ್ಬಂದಿ ಮತ್ತು ವೈದ್ಯರ ಕೊರತೆಯನ್ನು ನಾವು ಸರಿಪಡಿಸುತ್ತೇವೆ.

ಹಿಂದುಳಿದ ಗಡಿ ಪ್ರದೇಶಗಳಲ್ಲಿನ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ

178 (906) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಾದ್ಯಂತ ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರವು ಸೇರಿದಂತೆ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು ಹಾಗೂ ಪ್ರಾಥಮಿಕ ಆಸ್ಪತ್ರೆಗಳು ಎಷ್ಟು?

ಆ) ಸದರಿ ಆಸ್ಪತ್ರೆಗಳಲ್ಲಿ ವೈದ್ಯರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ವೈದ್ಯರನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) 7 ಜಿಲ್ಲಾ ಆಸ್ಪತ್ರೆಗಳು 45 ತಾಲ್ಲೂಕು ಆಸ್ಪತ್ರೆಗಳು ಹಾಗೂ 501 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಆ) ಹೌದು.

ಇ) ಸಾಮಾನ್ಯ ವೈದ್ಯರುಗಳ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. 500 ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಸರ್ಕಾರ ಕರಡು ಅಧಿಸೂಚನೆಯನ್ನು ದಿ: 15-05-06ರಂದು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆ ಹೊರಡಿಸಿದ ನಂತರ ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲಾಗುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಛೇರ್ಮನ್‌ರವರೆ, ಈ ಉತ್ತರವನ್ನು ನೋಡಿ ನನಗೇನೂ ತೃಪ್ತಿಯಾಗಿಲ್ಲ. ನಾನು ಅವರ ಬಗ್ಗೆ ಬಹಳ ಗೌರವವನ್ನಿಟ್ಟುಕೊಂಡಿರುವ ಮನುಷ್ಯ. ಇಷ್ಟಿದ್ದರೂ ಅವರ ಕಾರ್ಯಾಲಯದ ಮುಂದೆ ಸತ್ಯಾಗ್ರಹ ಮಾಡುತ್ತಿದ್ದೆ. ನಮ್ಮ ಜಿಲ್ಲೆಯ ಆಸ್ಪತ್ರೆಗಳಿಗೆ